# ಪ್ರವಾಸ

(43ನೇ ಪುಟದಿಂದ)

ಆಗ್ನೇಸ್, ನ್ಯೂಕ್ವೇ, ಸೈಂಟ್ ಆಸ್ಟಿಲ್, ಪೆನ್ಸಾನ್ಸ್, ಸೈಂಟ್ ಐವ್ಸ್ ಇಲ್ಲಿನ ಜನಪ್ರಿಯ 'ಬೀಚ್'ಗಳು. ಇದರ ಹೊರತಾಗಿ ಗ್ವಿದಿಯನ್, ನ್ಯೂಲಿನ್ ಮುಂತಾದ ಸಮುದ್ರ ತೀರಗಳ ಪಟ್ಟಣಗಳು ಶಾಂತವಾಗಿದ್ದುಕೊಂಡೇ ಜನರನ್ನು ಸೆಳೆಯುತ್ತವೆ. ಎಲ್ಲೆಲ್ಲೆಯೂ ತೆರೆನೊರೆಯಾಟದ (ಸರ್ಫಿಂಗ್) ಹಾಗೂ ಸ್ಕೂಬಾ ಡೈವಿಂಗ್ ತಂಡಗಳು, ತೀರದಲ್ಲಿ ಕುಣಿದಾಡುತ್ತಿರುವ ಚಿಣ್ಣರು, ಬಿಯರ್ ಗ್ಲಾಸ್ ಹಿಡಿದು ಸೂರ್ಯ ಸ್ನಾನ ಮಾಡುತ್ತಿರುವವರು– ತೀರದುದ್ದಕ್ಕೂ ಥರಾವರಿ ಜನ. ಆ ಕ್ಷಣಕ್ಕೆ 'ಅಬ್ಬಾ– ಬೇಸಿಗೆಯೆಂಬ ಸುಖವೆ!' ಎನ್ನಿಸಿತು.

### ಮಿನಾಕ್ ಥಿಯೇಟರ್:

ಕಾರ್ನ್‌ವಾಲ್ ಕೌಂಟಿಯ ಮತ್ತೊಂದು ಗರಿಮೆ ಈ ಸಮುದ್ರ ತಟದ ರಂಗ ಮಂದಿರ. 'ಮಿನಾಕ್ ಓಪನ್–ಏರ್ ಥಿಯೇಟರ್' ತೆರೆದುಕೊಳ್ಳುವುದು ವಿಶಾಲ ಸಮುದ್ರಕ್ಕೆ. ಎದುರಿನ ನೀಲ ಸಾಗರ–ತಲೆ ಮೇಲಿನ ನೀಲಾಕಾಶದ ನೈಸರ್ಗಿಕ ರಂಗ ಸಜ್ಜಿಕೆಯಲ್ಲಿ ನಿಂತ ಈ ಮಂದಿರದಲ್ಲಿ ಯಾವ ಕಾರ್ಯಕ್ರಮ ಆಯೋಜಿಸುವುದಿದ್ದರೂ ವರ್ಷಗಳ ಮುಂಚೆ ಬುಕಿಂಗ್ ಮಾಡಬೇಕಂತೆ!

### ಲ್ಯಾಂಡ್ಸ್ ಎಂಡ್:

ನಮ್ಮ ಪ್ರವಾಸದ ಕೊನೆಯ ದಿನ ಹೋಗಿದ್ದು ಈ ಜಾಗಕ್ಕೆ. ಲ್ಯಾಂಡ್ಸ್ ಎಂಡ್ ಜಾಗವನ್ನು ಇಂಗ್ಲೆಂಡಿನ ಕನ್ಯಾಕುಮಾರಿ ಎನ್ನಬಹುದೇನೋ. ಇದು ಕಾರ್ನ್‌ವಾಲ್ ಕೌಂಟಿಯ ತುತ್ತ ತುದಿ. ಹೆಸರೇ ಸೂಚಿಸುವಂತೆ ಇಂಗ್ಲೆಂಡಿನ ಭೂಮಿ ಮುಗಿಯುವುದು ಇಲ್ಲಿಯೇ. ಪ್ರಶಾಂತವಾದ ಈ ಜಾಗದಲ್ಲಿ 'ಲ್ಯಾಂಡ್ಸ್ ಎಂಡ್' ಎಂಬ ಫಲಕ; ಪಶ್ಚಿಮ ಹಾಗೂ ಪೂರ್ವ ದಿಕ್ಕಿನ ನಗರಗಳನ್ನು ಸೂಚಿಸುವ ಬಾಣದ ಗುರುತುಗಳು. ಈ ಫಲಕದ ಕೂಗಳತೆ ದೂರದಲ್ಲಿ ಒಂದು ಪುಟ್ಟ ಮನೆ. ಆ ಮನೆಯ ಹೆಸರು 'ಇಂಗ್ಲೆಂಡಿನ ಮೊದಲ ಮತ್ತು ಕೊನೆಯ ಮನೆ.' ಈ ಮನೆಯೆದುರು ಕೂತು ಫೋಟೋ ತೆಗೆಸಿಕೊಳ್ಳಲು ಸರತಿ ಸಾಲು!

ಈ ಸುತ್ತಾಟ, ಬೆಚ್ಚಗಿನ ಸಮುದ್ರದೊಡನೆ ಸರಸ– ಸಾಕಷ್ಟು ಲವಲವಿಕೆ ತುಂಬಿದ್ದು ಮಾತ್ರವಲ್ಲದೇ ಮತ್ತಾರು ತಿಂಗಳ ಚಳಿಗಾಲವನ್ನು ಎದುರಿಸಲು ಬೇಕಿದ್ದ ಶಕ್ತಿಯೂ ಕೊಟ್ಟಿತು. ನೇಸರನ ಕೃಪೆಯೂ ಚೆನ್ನಾಗಿದ್ದ ಕಾರಣ ನಾಲ್ಕು ದಿನದ ಕಾರ್ನ್‌ವಾಲ್–ಡೆವನ್ ತಿರುಗಾಟದ ಅದ್ಭುತ ಅನುಭವ ನಮ್ಮದಾಯಿತು.



ಮಿನಾಕ್ ಥಿಯೇಟರ್



ಈಡನ್ ಪ್ರಾಜೆಕ್ಟ್‌ನ ಜೀವಗೋಳ 2

ಹೆಲಿಕ್ಯಾಪ್ಟರ್‌ನಿಂದ ಕಾರ್ನ್‌ವಾಲ್ ಭೂಪ್ರದೇಶದ ನೋಟ

